## ಆರ್ಥಿಕ ಸಚಿವಾಲಯ

ಸಂಖ್ಯೆ :ಆಇ 4 ಸೇನಿಸೇ 07

ಕರ್ನಾಟಕ ಸರ್ಕಾರದ ಸಚಿವಾಲಯ,
5ನೇ ಹಂತ , ಬಹುಮಹಡಿಗಳ ಕಟ್ಟಡ,
ಬೆಂಗಳೂರು,ದಿನಾಂಕ: 20.09.2007.

### ಸುತ್ತೋಲೆ

ವಿಷಯ: 2007ರ ಪರಿಷ್ಕೃತ ವೇತನ ಶ್ರೇಣಿಯು ಜಾರಿಗೆ ಬಂದಿರುವ ಹಿನ್ನಲೆಯಲ್ಲಿ ಕುಟುಂಬ ಯೋಜನಾ ಕ್ರಮಗಳನ್ನು ಅನುಸರಿಸುವ ರಾಜ್ಯ ಸರ್ಕಾರಿ ನೌಕರರಿಗೆ ಉತ್ತೇಜನ ಕುರಿತು ಸ್ಪಷ್ಟೀಕರಣ.

ಉಲ್ಲೇಖ: ಸರ್ಕಾರದ ಸುತ್ತೋಲೆ ಸಂಖ್ಯೆ: ಎಫ್ ಡಿ 11 ಎಸ್ ಆರ್ ಎಸ್ 99, ದಿ:14.09.1999.

******

ಸಣ್ಣ ಕುಟುಂಬ ಸೂತ್ರವನ್ನು ಸರ್ಕಾರಿ ನೌಕರರಲ್ಲಿ ಉತ್ತೇಜಿಸುವ ಉದ್ದೇಶದಿಂದ, ಒಂದು ಅಥವಾ ಎರಡು ಜೀವಂತ ಮಕ್ಕಳನ್ನು ಹೊಂದಿದ ನಂತರ ಸರ್ಕಾರಿ ನೌಕರ ಅಥವಾ ಆತನ ಪತ್ನಿ ಸಂತಾನಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡಿಸಿಕೊಂಡ ಪ್ರಕರಣ ಗಳಲ್ಲಿ ಸರ್ಕಾರಿ ನೌಕರನಿಗೆ ಒಂದು ವಿಶೇಷ ವೇತನ ಬಡ್ತಿಯನ್ನು ವೈಯಕ್ತಿಕ ವೇತನವಾಗಿ ನೀಡುವ ಯೋಜನೆಯನ್ನು ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 27 ಎಸ್ ಆರ್ ಎಸ್ 85 ದಿ: 01.10.1985 ರಿಂದ ಜಾರಿಗೆ ತರಲಾಗಿದೆ. ಸದರಿ ಆದೇಶದ (V) ನೇ ಷರತ್ತಿನ ಪ್ರಕಾರ, ಈ ಯೋಜನೆಯ ಮೇರೆಗೆ ವೈಯಕ್ತಿಕ ವೇತನ ರೂಪದಲ್ಲಿ ಮಂಜೂರು ಮಾಡಲಾಗುವ ವಿಶೇಷ ವೇತನ ಬಡ್ತಿಯ ದರವು ಈ ಸೌಲಭ್ಯವನ್ನು ವಿಸ್ತರಿಸುವ ದಿನಾಂಕದಂದು ಸರ್ಕಾರಿ ನೌಕರನು ಪಡೆಯಲು ಅರ್ಹನಿರುವ ಮುಂದಿನ ವಾರ್ಷಿಕ ವೇತನಬಡ್ತಿ ದರಕ್ಕೆ ಸಮನಾಗಿರತಕ್ಕದಾಗಿದ್ದು, ನೌಕರನ ಸಂಪೂರ್ಣ ಸೇವಾವಧಿಯಲ್ಲಿ ಈ ಬಡ್ತಿಯ ದರವು ಖಾಯಂ ಆಗಿ ನಿಗದಿಯಾಗತಕ್ಕದ್ದಾಗಿರುತ್ತದೆ ಮತ್ತು ವೇತನದಲ್ಲಿನ ಯಾವುದೇ ಹೆಚ್ಚಳ ಅಥವಾ ಉನ್ನತ ಹುದ್ದೆಗೆ ಮುಂಬಡ್ತಿ ಇತ್ಯಾದಿ ಯಾವುದೇ ಕಾರಣದಿಂದಾಗಿ ಬದಲಾಗತಕ್ಕುದ್ದಲ್ಲವೆಂದು ತಿಳಿಸಲಾಗಿದೆ.

ದಿ: 01.07.2005 ರಿಂದ ದಿ:31.03.2007ರ ಅವಧಿಯಲ್ಲಿ ಮಿತ ಕುಟುಂಬ ಯೋಜನಾ ಕ್ರಮವನ್ನು ಅಳವಡಿಸಿಕೊಂಡ ಪ್ರಕರಣಗಳಲ್ಲಿ ಈ ಯೋಜನೆಯಡಿಯಲ್ಲಿ ವೈಯಕ್ತಿಕ ವೇತನ ರೂಪದಲ್ಲಿ ನೀಡಲಾಗುವ ವಿಶೇಷ ವೇತನ ಬಡ್ತಿಯನ್ನು 1998ರ ವೇತನ ಶ್ರೇಣಿಯ ದರದಲ್ಲಿ ಅಥವಾ 2007 ರ ಪರಿಷ್ಕೃತ ವೇತನ ಶ್ರೇಣಿಯ ದರದಲ್ಲಿ ಮಂಜೂರು ಮಾಡಬೇಕೆ? ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಕೋರಲಾಗುತ್ತಿದೆ.

5ನೇ ವೇತನ ಆಯೋಗದ ಶಿಫಾರಸ್ಸನಂತೆ ಜಾರಿಗೆ ಬಂದಿರುವ ವೇತನ ಶ್ರೇಣಿಗಳು 01.07.2005 ರಿಂದ ಕಾಲ್ಪನಿಕವಾಗಿ ಜಾರಿಗೆ ಬಂದಿದ್ದು, ವೇತನ ಶ್ರೇಣಿಗಳ ಪರಿಷ್ಕರಣೆಯ ಆರ್ಥಿಕ ಸೌಲಭ್ಯವು 1ನೇ ಏಪ್ರಿಲ್ 2006 ರಿಂದ ಲಭ್ಯವಾಗುತ್ತದೆ. ಅಲ್ಲದೇ ದಿ: 01.07.2005 ರಿಂದ 31.03.2006 ರವರೆಗಿನ ಅವಧಿಗೆ ಪರಿಷ್ಕೃತ ಶ್ರೇಣಿಯಲ್ಲಿನ ವೇತನ ನಿಗದಿಯಿಂದಾಗಿ ಅಥವಾ ಪುನರ್ ನಿಗದಿಯಿಂದಾಗಿ ವೇತನ ಮತ್ತು ಭತ್ಯೆಗಳ ಮತ್ತು ನಿವೃತ್ತಿ ವೇತನದ ಹೆಚ್ಚಳಕ್ಕೆ ಯಾವುದೇ ಸರ್ಕಾರಿ ನೌಕರನು ಅರ್ಹನಾಗಿರುವುದಿಲ್ಲ. ಅಲ್ಲದೇ ದಿ: 01.04.2006 ರಿಂದ 31.03.2007 ರ ಅವಧಿಗೆ ಪರಿಷ್ಕೃತ ವೇತನ ಶ್ರೇಣಿಯ ವೇತನ ನಿಗದಿಯಿಂದ ಅಥವಾ ಪುನರ್ ನಿಗದಿಯಿಂದ ವೇತನ ಮತ್ತು ಭತ್ಯೆಗಳ ಮತ್ತು ನಿವೃತ್ತಿ ವೇತನದ ಬಾಕಿಯನ್ನು 2008-09 ನೇ ಆರ್ಥಿಕ ವರ್ಷದಲ್ಲಿ ನಗದು ರೂಪದಲ್ಲಿ ಪಾವತಿ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಈ ಹಿನ್ನೆಲೆಯಲ್ಲಿ 01.07.2005 ರಿಂದ ದಿ: 31.03.2007ರ ಅವಧಿಯಲ್ಲಿ ಮಿತ ಕುಟುಂಬ ಯೋಜನಾ ಕ್ರಮವನ್ನು ಅಳವಡಿಸಿಕೊಂಡ ಪ್ರಕರಣಗಳಲ್ಲಿ ಈ ಯೋಜನೆಯಡಿಯಲ್ಲಿ ವೈಯಕ್ತಿಕ ವೇತನ ರೂಪದಲ್ಲಿ ನೀಡಲಾಗುವ ವಿಶೇಷ ವೇತನ ಬಡ್ತಿಯನ್ನು 2007 ರ ಪರಿಷ್ಕೃತ ವೇತನ ಶ್ರೇಣಿಯಲ್ಲಿ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ದಿ: 01.07.2005 ರಿಂದ ಜಾರಿಗೆ ಬರುವಂತೆ ಕಾಲ್ಪನಿಕವಾಗಿ ನೀಡತಕ್ಕದಾಗಿರುತ್ತದೆ. ಆದರೆ ಈ ಯೋಜನೆಯಲ್ಲಿ ಮಂಜೂರು ಮಾಡುವ ವೈಯಕ್ತಿಕ ಬಡ್ತಿ ದರದ ಆರ್ಥಿಕ ಸೌಲಭ್ಯವು 1ನೇ ಏಪ್ರಿಲ್ 2006 ರಿಂದ ಲಭ್ಯವಾಗುತ್ತದೆ. ಅಲ್ಲದೇ ದಿ: 01.07.2005 ರಿಂದ ದಿ: 31.03.2006 ರವರೆಗಿನ ಅವಧಿಗೆ ಪರಿಷ್ಕೃತ ಶ್ರೇಣಿಯಲ್ಲಿನ ವಿಶೇಷ ವೇತನ ಬಡ್ತಿಯ ಮಂಜೂರಾತಿಯಿಂದಾಗಿ ಉಂಟಾದ ಆರ್ಥಿಕ ಹೆಚ್ಚಳಕ್ಕೆ ಯಾವುದೇ ಸರ್ಕಾರಿ ನೌಕರನು ಅರ್ಹನಾಗಿರುವುದಿಲ್ಲ. ಅಲ್ಲದೇ ದಿ: 01.04.2006 ರಿಂದ ದಿ: 31.03.2007 ರ ಅವಧಿಯಲ್ಲಿ ವಿಶೇಷ ವೇತನ ಬಡ್ತಿಯ ಮಂಜೂರಾತಿಯಿಂದ ಉಂಟಾದ ಬಾಕಿಯನ್ನು 2008-09 ನೇ ಆರ್ಥಿಕ ವರ್ಷದಲ್ಲಿ ನಗದು ರೂಪದಲ್ಲಿ ಪಾವತಿಸತಕ್ಕದ್ದು. ಉಳಿದಂತೆ ಈ ಸೌಲಭ್ಯ ಪಡೆಯುವ

ನೌಕರರು ದಿ: 01.10.1985ರ ಎಫ್ ಡಿ 27 ಎಸ್ ಆರ್ ಎಸ್ 85 ನೇ ಕ್ರಮಾಂಕದ ಆದೇಶದಲ್ಲಿ ನಿಗದಿಪಡಿಸಿರುವ ಎಲ್ಲಾ ಷರತ್ತುಗಳನ್ನು ಪೂರೈಸಿರಬೇಕೆಂಬುದನ್ನು ಈ ಮೂಲಕ ಸ್ಪಷ್ಟಪಡಿಸಿದೆ.

(ಪಿ.ನಾರಾಯಣ) 20/9

ಸರ್ಕಾರದ ಅಧೀನ ಕಾರ್ಯದರ್ಶಿ,

ಆರ್ಥಿಕ ಇಲಾಖೆ, (ಸೇವೆಗಳು-1).

**ಪ್ರತಿ:**

1. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳಿಗೆ.
2. ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು/ವಿಶೇಷ ಕಾರ್ಯದರ್ಶಿಗಳು/ ಅಪರ ಕಾರ್ಯದರ್ಶಿಗಳು/ ಜಂಟಿ ಕಾರ್ಯದರ್ಶಿಗಳು/ಉಪಕಾರ್ಯದರ್ಶಿಗಳಿಗೆ ಹಾಗೂ ಅಧೀನ ಕಾರ್ಯದರ್ಶಿಗಳಿಗೆ.
3. ಮುಖ್ಯಮಂತ್ರಿಗಳ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
4. ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸುವುದಕ್ಕಾಗಿ
5. ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ.
6. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ.
7. ಮಹಾಲೇಖಪಾಲರು (ಲೆಕ್ಕಪತ್ರ: ಲೆಕ್ಕ ಪರಿಶೋಧನೆ: ಜಿ.ಎಂ.ಶಾಖೆ), ಕರ್ನಾಟಕ, ಬೆಂಗಳೂರು.
8. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚನ್ಯಾಯಾಲಯ, ಬೆಂಗಳೂರು.
9. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು. ಪತ್ರದೊಂದಿಗೆ
10. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
11. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
12. ಕಾರ್ಯದರ್ಶಿ, ಕರ್ನಾಟಕ ವಿಧಾನಸಭೆ/ ವಿಧಾನ ಪರಿಷತ್ತು, ಬೆಂಗಳೂರು.
13. ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು.
14. ಎಲ್ಲಾ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು.
15. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
16. ಕರ್ನಾಟಕ ಸರ್ಕಾರಿ ಸಚಿವಾಲಯದ ಎಲ್ಲಾ ಶಾಖೆಗಳು.
17. ಕರ್ನಾಟಕ ಸರ್ಕಾರಿ ಸಚಿವಾಲಯ ಗ್ರಂಥಾಲಯ : ವಿಧಾನ ಮಂಡಲ ಗ್ರಂಥಾಲಯ.
18. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ (ಎಲ್ಲಾ ಜಿಲ್ಲಾ ಖಜಾನೆಗಳು).
19. ವಾರಪತ್ರ.

*****

CJH : 20907